ರೂರಲ್ ಏರಿಯಾದವರಿಗೆ ಒಂದೊಂದು ಕೆ.ಜಿ. ಎಂದು ಕೊಟ್ಟಿದ್ದೇವೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ನಮ್ಮ ಆದಾಯ ಮಿತಿ ಏನು ಇದೆ ಹಸಿರು ಕಾರ್ಡುದಾರರಿಗೆ 3,500 ಏನಿದೆ ಇದನ್ನು, 6,000 ರೂ.ಗೆ ಮಾಡಬೇಕೆಂದು ಮಂತ್ರಿಮಂಡಲ ತೀರ್ಮಾನ ಮಾಡಿ ಹೊಸ ಸಮೀಕ್ಷೆ ಮಾಡಬೇಕು ಎಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಾವು ಈಗಾಗಲೇ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ. ಈ ತಿಂಗಳು ಮುಗಿಯುತ್ತಾ ಬರುತ್ತಿದೆ. ಬಜೆಟ್ ವರ್ಷ ಆದತಕ್ಷಣ 1992ರ ಏಪ್ರಿಲ್ ತಿಂಗಳಿನಿಂದ ಹಸಿರು ಕಾರ್ಡುಗಳನ್ನು ಹೊಸದಾಗಿ ಕೊಡಬೇಕು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನು ಖಚಿತವಾಗಿ ಮುಂದಿನ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಮಾನ್ಯ ಸದಸ್ಯರ ಆನಿಸಿಕೆ ಏನು ಇದೆ ಎಂದರೆ ಕಾರ್ಡುದಾರರಿಗೆ ಕೊಡತಕ್ಕಂಥ ಕಡಿಮೆ ಪ್ರಮಾಣದ ಆಹಾರ ವಸ್ತುಗಳನ್ನು ಜಾಸ್ತಿ ಮಾಡಬೇಕೆಂದು ಇದೆ. ಆ ಬಗ್ಗೆ ಸರ್ಕಾರಕ್ಕೆ ಕೂಡ ಕಳಕಳಿ ಇದೆ. ನಮ್ಮ ಬೇಡಿಕೆಯನ್ನು ಕುರಿತು ಕೇಂದ್ರಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಇವತ್ತು ನಮ್ಮ ಬೇಡಿಕೆ ಏನು ಇದೆ ಅದು ತಾಳೆ ಎಣ್ಣೆ ಇರಬಹುದು, ಸೀಮೆಎಣ್ಣೆ ಇರಬಹುದು, ಸಕ್ಕರೆ ಇರಬಹುದು, ಅಕ್ಕಿ, ಗೋಧಿ ಇರಬಹುದು, ಇವುಗಳನ್ನು ನಮ್ಮ ಬೇಡಿಕೆಗೆ ತಕ್ಕಂತೆ ಕೊಡಬೇಕು, ಈ ಕಾರ್ಡುಗಳು ಕೂಡ ಜಾಸ್ತಿ ಆಗುತ್ತಿದೆ ಎನ್ನುವ ಮಾತನ್ನು ಹೇಳಿ ಪ್ರಧಾನಮಂತ್ರಿಯವರ ಗಮನವನ್ನು ಸೆಳೆದಿದ್ದಾರೆ. ನಾವು ಅದರ ಬಗ್ಗೆ ಗಮನವನ್ನು ಹರಿಸಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ :- ಮಾನ್ಯ ಅಧ್ಯಕ್ಷರೇ, 3,500 ಆದಾಯ ಮಿತಿ ಇರತಕ್ಕಂಥ ಕಾರ್ಡುದಾರರಿಗೆ ಕೊಡಲಿಕ್ಕೆ ಸಾಧ್ಯವಾಗಿಲ್ಲ, ಇವರಿಗೆ ಕೊಡಲಿಕ್ಕೆ ಬೇಕಾದಷ್ಟು ಕೊರತೆ ಇದೆ. ಇನ್ನು 6,600 ಆದಾಯ ಮಿತಿಯಲ್ಲಿ ಬಹಳಷ್ಟು ಜನ ಬರುತ್ತಾರೆ, ಅದರಲ್ಲಿ ಎಷ್ಟು ಕೊರತೆ ಆಗಬಹುದು ಎಂಬುದನ್ನು ತಾವು ದಯಮಾಡಿ ತಿಳಿಸಬೇಕು. ತಾವು ಪ್ರತಿಯೊಂದಕ್ಕೂ ಕೇಂದ್ರದ ಮೊರೆ ಹೋಗದೆ ಬಹಿರಂಗ ಮಾರುಕಟ್ಟೆಯಲ್ಲಿ ಸುಗ್ಗಿ ಕಾಲದಲ್ಲಿ ಆಹಾರ ಧಾನ್ಯವನ್ನು ತೆಗೆದುಕೊಂಡು ಏಕೆ ಪಡಿತರ ವ್ಯವಸ್ಥೆಯಲ್ಲಿ ಅದನ್ನು ಮಾರಬಾರದು. ಈ ಬಗ್ಗೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನೀಡಿರತಕ್ಕ ಸಲಹೆಯನ್ನು ಸರ್ಕಾರ ಖಂಡಿತವಾಗಿಯೂ ಸ್ವಾಗತ ಮಾಡುತ್ತದೆ. ಅದನ್ನು ಪರಿಶೀಲನೆ ಮಾಡಿ ಆ ದಿಕ್ಕಿನಲ್ಲಿ ಕೂಡ ಪ್ರಯತ್ನ ಮಾಡುತ್ತೇವೆ.

## ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಅಭ್ಯರ್ಥಿಗಳ ಆಯ್ಕೆ.

124(649). ಶ್ರೀ ಆರ್.ಬಿ. ತಿಮ್ಮಾಪುರ (ಮುಧೋಳ್):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ದ್ವಿತೀಯ ದರ್ಜೆ ಸಹಾಯಕ ಪರೀಕ್ಷೆಗೆ 1986ರಲ್ಲಿ ಕುಳಿತು ತೇರ್ಗಡೆಯಾದ ಅಭ್ಯರ್ಥಿಗಳಿಗೆ, ಕಾಲೇಜು ಶಿಕ್ಷಣ ನಿರ್ದೇಶಕರ ಕಛೇರಿಯಲ್ಲಿ ಸೇವೆ ಸಲ್ಲಿಸಲು ಕಳಿಸಿದ 95 ಜನ ಅಭ್ಯರ್ಥಿಗಳಿಗೆ ಸೇವೆಗೆ ಅವಕಾಶ ಕೊಡಲಾಗಿದೆಯೇ?

ಆ) ಹಾಗಿದ್ದಲ್ಲಿ ಅವಕಾಶ ಎಷ್ಟು ಅಭ್ಯರ್ಥಿಗಳಿಗೆ ಸಿಕ್ಕಿದೆ?

ಇ) ಅವಕಾಶ ಸಿಗದ ಅಭ್ಯರ್ಥಿಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):-

ಅ) ಇಲ್ಲ.

ಆ) 50 ಅಭ್ಯರ್ಥಿಗಳು.

ಇ) ನೇರ ನೇಮಕಾತಿ ಹುದ್ದೆಗಳು ಲಭ್ಯವಾದಂತೆಲ್ಲಾ ಉಳಿದ ಅಭ್ಯರ್ಥಿಗಳಿಗೆ ಅವಕಾಶ ನೀಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಸಚಿವರ ಪರವಾಗಿ) :- ಸನ್ಮಾನ್ಯ ಅಧ್ಯಕ್ಷಣೆಯವರೇ, ಶಿಕ್ಷಣ ಸಚಿವರ ಪರವಾಗಿ ಉತ್ತರ ಕೊಡಲಿಕ್ಕೆ ತಮ್ಮ ಅನುಮತಿ ಬೇಡುತ್ತೇನೆ. ಈಗಾಗಲೇ ಸಂಬಂಧಪಟ್ಟ ಸದಸ್ಯರಿಗೆ ಲಿಖಿತ ಉತ್ತರಗಳನ್ನು ಕಳುಹಿಸಿಕೊಡಲಾಗಿದೆ.

ಶ್ರೀ ಆರ್.ಬಿ. ತಿಮ್ಮಾಪ್ಪುರ್:- ಅಧ್ಯಕ್ಷರೇ, ನೇರ ನೇಮಕಾತಿ ಹುದ್ದೆಗಳು ಲಭ್ಯವಾದಂತೆಲ್ಲಾ ಉಳಿದ ಅಭ್ಯರ್ಥಿಗಳಿಗೆ ಅವಕಾಶ ಕೊಡಲಾಗುವುದೆಂದು ಹೇಳಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಕೊಲಿಜಿಯೇಟ್ ಎಜುಕೇಷನ್‌ನಲ್ಲಿ 45 ಅಭ್ಯರ್ಥಿಗಳಿಗೆ ಇನ್ನು ಪೋಸ್ಟಿಂಗ್ಸ್ ಕೊಡದೆ ಆಲೆದಾಡಿಸುತ್ತಿದ್ದಾರೆ. ಇನ್ನೂ ಯಾವಾಗ ಲಭ್ಯವಾಗುತ್ತದೆ. ಬೇರೆ ಡಿಪಾರ್ಟಮೆಂಟಿಗೆ ಕೊಡಲಿಕ್ಕೆ ಏನು ತೊಂದರೆ ಇದೆ ಎಂದು ಸನ್ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೇ, ಆಯ್ಕೆಯಾದಂಥ 95 ಜನರಲ್ಲಿ 50 ಜನಕ್ಕೆ ಈಗಾಗಲೇ ಪೋಸ್ಟಿಂಗ್ಸ್ ಕೊಡಲಾಗಿದೆ. ಇನ್ನು 45 ಜನ ಅಭ್ಯರ್ಥಿಗಳಿಗೆ ಸ್ಥಾನಗಳು ಇಲ್ಲದೇ ಇರುವುದರಿಂದ ಅವರಿಗೆ ಕೊಡುವುದಕ್ಕೆ ಆಗಲಿಲ್ಲ. ಕಳೆದ ಸಾರಿ ಸುಮಾರು 18 ಕಾಲೇಜುಗಳನ್ನು ನಾವು ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಸ್ಥಾನಗಳ ಆಯ್ಕೆ ಮಾಡುವುದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ಆ ಸಂದರ್ಭದಲ್ಲಿ ಇವರ ನೇಮಕಾತಿಗಳನ್ನು ಪರಿಶೀಲಿಸಲಾಗುವುದು.

ಶ್ರೀ ಆರ್.ಬಿ. ತಿಮ್ಮಾಪ್ಪುರ್:- ಅಧ್ಯಕ್ಷರೇ, ಕೆ.ಎ.ಟಿ. ಅವರು ಈಗಾಗಲೇ ಅವರಿಗೆ 6 ತಿಂಗಳಿನಲ್ಲಿ ಕೊಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಈಗಾಗಲೇ ಒಂದು ವರ್ಷಗಳಾದರೂ ಕೊಡದೇ ಇರುವುದರಿಂದ, ಇನ್ನು ಎಷ್ಟು ದಿವಸದಲ್ಲಿ ಕೊಡುತ್ತಾರೆ ಎನ್ನುವುದು ನಿಖರವಾಗಿ ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಕೆ.ಎ.ಟಿ. ಯಿಂದ ಆದೇಶ ಬಂದಿರುವುದು ನಿಜ. ಆದರೆ ನಮ್ಮಲ್ಲಿ ಹುದ್ದೆಗಳ ಅಭಾವ ಇರುವುದರಿಂದ ಮೊದಲು ಸರ್ಕಾರದಿಂದ ಹುದ್ದೆಗಳನ್ನು ಮಂಜೂರಾತಿ ಮಾಡಿಕೊಂಡು ಆ ಮಂಜೂರಾತಿ ದೊರೆತ ನಂತರ ಅವರನ್ನು ನೇಮಕಾತಿ ಮಾಡತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು:- ಆಯಿತು, ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಆರ್.ಬಿ. ತಿಮ್ಮಾಪ್ಪುರ್:- ಇಲ್ಲಿ ಬೇರೆ ಡಿಪಾರ್ಟ್‌ಮೆಂಟ್‌ಗೆ ಕೊಡುವುದಕ್ಕೆ ಏನು ತೊಂದರೆ ಇದೆ? ಬೇರೆ ಡಿಪಾರ್ಟಮೆಂಟಿನಲ್ಲಿ ಪೋಸ್ಟ್‌ಗಳು ಖಾಲಿ ಇಲ್ಲವೇ? ಪಿ.ಎನ್.ಸಿ. ಅವರು ಕೊಲಿಜಿಯೇಟ್ ಎಜುಕೇಷನ್‌ಗೆ ಕೇಳಿದಾಗ ಅವರು 90 ಅಭ್ಯರ್ಥಿಗಳನ್ನು ಏತಕ್ಕೆ ಕೇಳಿದ್ದಾರೆ? ಪಿ.ಎಸ್.ಸಿ. ಅವರು ಹಾಗೆಯೇ ಕಳುಹಿಸಿದ್ದಾರೆಯೇ ಹೇಗೆ?

ಶ್ರೀಮತಿ ದಮಯಂತಿ ಬೋರೇಗೌಡ:- 86ನೇ ಇಸವಿಯಲ್ಲಿ ಸೆಲೆಕ್ಟ್ ಆಗಿದ್ದರು. ಅವರಿಗೆ ಇಲ್ಲಿಯವರೆಗೂ ಹುದ್ದೆಗಳು ಇದ್ದರೂ ಸಹ ಕೊಡದೇ ಇರುವುದು ಬಹಳ ಶೋಚನೀಯ ಅಲ್ಲವೇ? ಕೆ.ಎ.ಟಿ. ಆರ್ಡರ್ ಇದ್ದರೂ ಸಹ ಅವರಿಗೆ ಇದುವರೆಗೂ ಏತಕ್ಕೆ ಕೊಟ್ಟಿಲ್ಲ?

ಶ್ರೀ ಜಿ. ಪುಟ್ಟಸ್ವಾಮಿಗೌಡ:- (ಆರೋಗ್ಯ ಸಚಿವರು) (ಶಿಕ್ಷಣ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಹುದ್ದೆಗಳನ್ನು ಇಟ್ಟುಕೊಂಡು ಕೊಟ್ಟಿಲ್ಲ ಎಂದು ಏನೂ ಇಲ್ಲ, ಹುದ್ದೆಗಳ ಅಭಾವವಿರುವುದರಿಂದ ಅದನ್ನು ಕೊಡಲಿಕ್ಕೆ ಆಗಲಿಲ್ಲ, ಕಳೆದ ಸಾರಿ 18 ಕಾಲೇಜುಗಳನ್ನು ನಾವು ಹೊಸದಾಗಿ ಮಂಜೂರು ಮಾಡಿದ್ದೇವೆ. ಸುಮಾರು 34 ಪೋಸ್ಟ್‌ಗಳನ್ನು ನಾವು ತುಂಬುವುದಕ್ಕೆ ಆರ್ಥಿಕ ಇಲಾಖೆಗೆ ನಾವು ಈಗಾಗಲೇ ಪರವಾನಗಿಗೊಸ್ಕರ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಅದು ಬಂದ ತಕ್ಷಣ ಹುದ್ದೆಗೆ ಮಂಜೂರಾತಿ ದೊರೆತ ನಂತರ ಅವುಗಳನ್ನು ಭರ್ತಿ ಮಾಡುತ್ತೇವೆ.

## ಕರ್ನಾಟಕ ವಿದ್ಯುತ್ ಮಂಡಳಿಯ ಕಛೇರಿಯನ್ನು ಸ್ಥಳಾಂತರಿಸುವುದು

125 (1086). ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಮುಖ್ಯ ಅಭಿಯಂತರರ ಕಾರ್ಯಾಲಯವನ್ನು ಮಂಗಳೂರಿನಿಂದ ಹಾಸನಕ್ಕೆ ವರ್ಗಾಯಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಮೇಲ್ಕಂಡ ಕಾರ್ಯಾಲಯವನ್ನು ವರ್ಗಾಯಿಸುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?